ಇ) ಹೌದು.

ಈ) ಕಾಮಗಾರಿಯು ತೀವ್ರ ಪ್ರಗತಿಯಲ್ಲಿದ್ದು ಈ ಸಾಲಿನಲ್ಲಿ ಮುಗಿಸಲು ಕ್ರಮ ಜರುಗಿಸಲಾಗುತ್ತದೆ.

ಶಿಡ್ಲಘಟ್ಟದ ಗೌಡನಕೆರೆ ಅಂಗಳದಲ್ಲಿ ಬಸ್ ನಿಲ್ದಾಣ ನಿರ್ಮಾಣ

2979:(4067):

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಡ್ಲಘಟ್ಟ ಪುರಸಭೆಯವರು ಶಿಡ್ಲಘಟ್ಟದ ಗೌಡನಕೆರೆ ಅಂಗಳದಲ್ಲಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ಸುಮಾರು 8 ಎಕರೆ ಜಾಗವನ್ನು ಬಸ್ ನಿಲ್ದಾಣ ಮತ್ತು ಇತರ ವಿವಿದ ಸಾರ್ವಜನಿಕ ಉದ್ದೇಶಗಳಿಗೆ ಉಪಯೋಗಿಸಲು ಅನುಮತಿ ಕೋರಿರುವುದು ನಿಜವೆ?

ಆ) ಹಾಗಿದ್ದಲ್ಲಿ ಸದರಿ ಜಾಗದಲ್ಲಿ ನಗರದ ನೀರು ಸಂಗ್ರಹವಾಗಿ ವಾತಾವರಣ ಕಲುಶಿತಕೊಂಡು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಜಮೀನನ್ನು ಸರ್ಕಾರವು ಕೂಡಲೇ ಪುರಸಭೆಯಿಂದ ಕೋರಿಕೆಯಂತೆ ಪುರಸಭೆಗೆ ವಹಿಸಿ ಕೊಡುವುದಕ್ಕೆ ಕ್ರಮ ಕೈಗೊಳ್ಳುವರೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಹೌದು.

ಆ) ಹೌದು.

ಇ) ಇದನ್ನು ಪರಿಶೀಲಿಸಲಾಗುವುದು.

ದಾವಣಗೆರೆ ಪೋಲೀಸ್ ಸಿಬ್ಬಂದಿ ಹೆಚ್ಚಳ ವಾಹನ ಸೌಕರ್ಯ,ಕಛೇರಿ ಹಾಗೂ ಕಟ್ಟಡಗಳ ನಿರ್ಮಾಣ